ಶ್ರೀ ಜಿ.ಹೆಚ್. ಶ್ರೀನಿವಾಸ್: ಸರ್ಕಾರ ಇದಕ್ಕೆ ಆಡಳಿತಾತ್ಮಕ ಅನುಮೋದನೆ ಕೊಟ್ಟಿರುವುದು ಮಾರ್ಚ್ ತಿಂಗಳಲ್ಲಿ, ಇನ್ನುವರೆಗೆ ಟೆಂಡರ್ ಕರೆಯತಕ್ಕಂಥ process ಏನೂ ಆಗಿಲ್ಲ.

ಶ್ರೀ ಎಂ.ಬಿ. ಪಾಟೀಲ್: ಅಜ್ಜಂಪುರ ಮತ್ತು ಶಿವನಿ ಹೋಬಳಿ ಬಳಿ ತರೀಕೆರೆಗೆ 22,189 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗುತ್ತದೆ ಹಾಗೂ 87 ಕೆರೆಗಳನ್ನು ತುಂಬಿಸಲಿಕ್ಕೆ ಭದ್ರಾ ಮೇಲ್ದಂಡೆ ಪರಿಷ್ಕೃತ ಯೋಜನೆಯ ವರದಿಯಲ್ಲಿ ಇದಕ್ಕೆ ಅನುವು ಮಾಡಿ ಇದಕ್ಕೆ ಸರ್ಕಾರ ದಿನಾಂಕ: 6–3–2015 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ.

ಶ್ರೀ ಜಿ.ಹೆಚ್. ಶ್ರೀನಿವಾಸ್: ಟೆಂಡರ್ ಕರೆಯದೆ ಕೆಲಸ ಮಾಡುವುದಕ್ಕೆ ಹೇಗೆ ಆಗುತ್ತದೆ?

ಅಧ್ಯಕ್ಷರು: ಆಯಿತು, ಮಾನ್ಯ ಎಸ್.ಆರ್.ಶ್ರೀನಿವಾಸ್, ಇಲ್ಲ. ಶ್ರೀ ಸಿ.ಟಿ. ರವಿ, ಕೇಳಿ.

10. ವಿಷಯ: ಬೆಂಗಳೂರು ಆನೇಕಲ್ ಹತ್ತಿರ ಲಕ್ಷ್ಮೀಪುರದಲ್ಲಿ ತ್ಯಾಜ್ಯದ ಬೆಂಕಿಯಲ್ಲಿ ನೀರಿನಲ್ಲಿ ಬೆಂಕಿಯ ಜ್ವಾಲೆ ಉಂಟಾಗಿ ಕ್ವಾರಿಗಳಿಂದ ವಿಷಾನಿಲ ಹೊರಗೆ ಬರುತ್ತಿರುವ ಬಗ್ಗೆ.

– – –

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು): ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಆನೇಕಲ್ ಹತ್ತಿರ ಲಕ್ಷ್ಮೀಪುರದಲ್ಲಿ ತ್ಯಾಜ್ಯದ ಬೆಂಕಿಯಲ್ಲಿ ನೀರಿನಲ್ಲಿ ಬೆಂಕಿಯ ಜ್ವಾಲೆ ಉಂಟಾಗಿ ಕ್ವಾರಿಗಳಿಂದ ವಿಷಾನಿಲ ಹೊರಗೆ ಬರುತ್ತಿರುವುದಕ್ಕೆ ಸಂಬಂಧಪಟ್ಟಂತೆ ಇದರಿಂದ ಜನರ ಆರೋಗ್ಯಕ್ಕೆ ಕೆಟ್ಟ ಪರಿಣಾಮ ಆಗುತ್ತಿರುವುದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು: ಮಾನ್ಯ ಕಾನೂನು ಸಚಿವರೆ, ಇವತ್ತು ಇಲ್ಲದಿದ್ದರೆ ನಾಳೆ ಉತ್ತರ ಹೇಳಿ. ಆನೇಕಲ್ ತಾಲ್ಲೂಕಿನಲ್ಲಿ ಮೀಥೇನ್ ಅನಿಲ ಬರುತ್ತಿರುವುದರ ಬಗ್ಗೆ.

ಶ್ರೀ ಸಿ.ಟಿ. ರವಿ: ಪೇಪರಿನಲ್ಲಿ ಎಲ್ಲಾ ಸುದ್ದಿ ಆಗಿದೆ. ಹೊಸ ಆವಿಷ್ಕಾರ ಏನಾದರೂ ಕಂಡು ಹಿಡಿದಿದ್ದೀರಾ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾವು ನೋಡಿದ್ದೇವೆ, ಇದು ಸರ್ಕಾರಕ್ಕೆ ಗೊತ್ತಿದೆ. ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಸಿ.ಟಿ. ರವಿ: ಮಾನ್ಯ ಕಾನೂನು ಸಚಿವರೆ, ಬೆಂಗಳೂರು ನಗರಾಭಿವೃದ್ಧಿ ಮುಖ್ಯಮಂತ್ರಿಗಳ ಕಡೆ ಇದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಪೌರಾಡಳಿತ ಸಚಿವರು ಇದ್ದಾರೆ ಉತ್ತರ ಕೊಡುತ್ತಾರೆ.

ಅಧ್ಯಕ್ಷರು: ನೀವು ಇರುವುದರಿಂದ ನೀವೇ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ: ಆಯಿತು, ನಾಳೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು: ನಾಳೆ ಕೊಡುತ್ತಾರೆ. ಹೆಚ್.ಡಿ.ರೇವಣ್ಣ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ): ಮಾನ್ಯ ಅಧ್ಯಕ್ಷರೆ, ವಿಧಾನಸೌಧಕ್ಕೆ board ಹಾಕಿ ಬಿಡಿ, ನಾಳೆ ನಾಳೆ ಎಂದು. ಯಾವುದಕ್ಕೂ ಉತ್ತರ ಬಂದಿಲ್ಲ. ನಾಳೆ ಬಾ ಎಂದು ಬಾಗಿಲಿಗೆ ಬರೆದಿರುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ: ತಾವು ಈ ಕಡೆ ಕುಳಿತುಕೊಂಡಾಗ ಹೇಳುತ್ತಿದ್ದನ್ನು ತಾವು ಅದನ್ನೇ ಜ್ಞಾಪಿಸಿಕೊಳ್ಳುತ್ತಿದ್ದೀರಿ. ನಾನು ಏನಾದರೂ assurance ಕೊಟ್ಟರೆ ನಾನು note ಮಾಡಿ immediate ಆಗಿ ಉತ್ತರ ತರಿಸಿಕೊಂಡು ಕೊಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಏನೂ ಉತ್ತರಗಳು ಬರುತ್ತಿಲ್ಲ. ಪ್ರಶ್ನೆ ಕೇಳಿದರೂ ಉತ್ತರ ಬರುತ್ತಿಲ್ಲ. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದರೂ ಉತ್ತರಗಳು ಬರುತ್ತಿಲ್ಲ, ಗಮನ ಸೆಳೆಯುವುದಕ್ಕೆ ಕೂಡ ಉತ್ತರಗಳು ಇಲ್ಲ. ನಾಳೆ ಬಾ ಎಂದು ಒಂದು ವಿಧಾನಸೌಧಕ್ಕೆ ಒಂದು board ಹಾಕಿ ಬಿಡಿ ಮುಗಿದು ಹೋಗುತ್ತದೆ.

ಅಧ್ಯಕ್ಷರು: ಮಾನ್ಯ ನೀರಾವರಿ ಸಚಿವರು ಉತ್ತರವನ್ನು ಶುರು ಮಾಡಿ ಬೇಗ ಪೂರೈಸಿ.

5) ವಿತ್ತೀಯ ಕಾರ್ಯಕಲಾಪಗಳು :

1: 2015–16ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೆಯ ಕಂತು) ಮಂಡಿಸುವುದು:

ಶ್ರೀ ಟಿ.ಬಿ. ಜಯಚಂದ್ರ: 2015–16ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

2. 2015–16ನೇ ಸಾಲಿನ ಜಲಸಂಪನ್ಮೂಲ ಇಲಾಖಾ ಬೇಡಿಕೆಯ ಮೇಲೆ ಮುಂದುವರೆದ ಉತ್ತರ

ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಈ AIBP ವಿಷಯದಲ್ಲಿ ನಾನು ಒಂದು ವಿಚಾರವನ್ನು ವ್ಯಕ್ತಪಡಿಸಿದ್ದೆ. ಕೇಂದ್ರ ಸರ್ಕಾರ ಈ AIBP ಗೆ ಹಿಂದೆ 8–10 ಸಾವಿರ ಕೋಟಿ ರೂ.ಗಳನ್ನು ಇಡುತ್ತಿತ್ತು. ಈಗಿನ ಕೇಂದ್ರ ಸರ್ಕಾರ 1000 ಕೋಟಿ ರೂ.ಗಳನ್ನು ಇವತ್ತಿನ ದಿವಸ ಇಡೀ ರಾಷ್ಟ್ರಕ್ಕೇ ಇಟ್ಟಿದೆ. ನಾವು ನಮ್ಮ ರಾಜ್ಯಕ್ಕೇ AIBPಗೆ 1500 ಕೋಟಿ ರೂ.ಗಳನ್ನು ಕೇಳುತ್ತಿದ್ದೇವೆ. ಈ National Projects ಎಲ್ಲಾ ಇವೆ, ಇವು ಎಲ್ಲಾ ಕೂಡ ಈ AIBP ಯ ಒಂದು component. ಹೀಗಾಗಿ ಹಿಂದಿನ